All India Radio: Bangalore
National Bulletin In Kannada
02.03.2025 19.35 p.m.
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು

- ವಿಕಸಿತ ಭಾರತ್ ಗುರಿ ಸಾಧನೆಯಲ್ಲಿ ಯುವಕರ ಪಾತ್ರ ಮಹತ್ವದ್ದು ; ಉಪರಾಷ್ಟ್ರಪತಿ ಜಗದೀಪ್ ಧನ್‌ಕರ್
- ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದಲ್ಲಿ ಇಂದು ಸೋಮನಾಥ ದೇವಾಲಯದ ಟ್ರಸ್ಟ್‌ನ ಸಭೆ
- ಕರ್ನಾಟಕ ವಿಧಾನಮಂಡಲ ಅಧಿವೇಶನ ರಾಜ್ಯಪಾಲರ ಭಾಷಣದೊಂದಿಗೆ ನಾಳೆ ಆರಂಭ ; ಶುಕ್ರವಾರ ಬಜೆಟ್ ಮಂಡನೆ
- ಐಸಿಸಿ ಚಾಂಪಿಯನ್ ಕ್ರಿಕೆಟ್ ಟ್ರೋಫಿ ; ನ್ಯೂಜಿಲೆಂಡ್‌ಗೆ ಗೆಲ್ಲಲು ಭಾರತದಿಂದ ೨೫೦ ರನ್‌ಗಳ ಗುರಿ

<><><>

ದೇಶವನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರವನ್ನಾಗಿಸುವ ವಿಕಸಿತ ಭಾರತ್ ಗುರಿ ಸಾಧನೆಯಲ್ಲಿ ಯುವಕರ ಪಾತ್ರ ಮಹತ್ವದ್ದಾಗಿದೆ ಎಂದು ಉಪರಾಷ್ಟ್ರಪತಿ ಜಗದೀಪ್ ಧನ್‌ಕರ್ ಹೇಳಿದ್ದಾರೆ. ಅವರು, ತಿರುವನಂತಪುರಂನಲ್ಲಿ ಇಂದು ಭಾರತೀಯ ವಿಚಾರ ಕೇಂದ್ರ ಆಯೋಜಿಸಿದ್ದ ಪಿ. ಪರಮೇಶ್ವರಂ ಸ್ಮಾರಕ ಉಪನ್ಯಾಸ ನೀಡಿದರು. ಪ್ರಸ್ತುತ ದೇಶ ೫ನೇ ಅತಿದೊಡ್ಡ ಜಾಗತಿಕ ಆರ್ಥಿಕತೆಯಾಗಿದೆ. ಸದದಲ್ಲೇ ೩ನೇ ಸ್ಥಾನವನ್ನು ಪಡೆದುಕೊಳ್ಳಲಿದೆ ಎಂದು ಅವರು ಹೇಳಿದರು. ನಮ್ಮ ಅಭಿವ್ಯಕ್ತಿಯಲ್ಲಿ ಮಾತುಕತೆ, ಆದರ್ಶವಾದಿ ಚರ್ಚೆಗಳು ಮುಂಚೂಣಿಗೆ ಬರಬೇಕೆಂದು ಉಪರಾಷ್ಟ್ರಪತಿ ಜಗದೀಪ್ ಧನ್‌ಕರ್ ಹೇಳಿದರು.

<><><>

ಗುಜರಾತ್ ಪ್ರವಾಸದಲ್ಲಿರುವ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ವಿಶ್ವ ವಿಖ್ಯಾತ ಸೋಮನಾಥ ದೇವಾಲಯದ ಟ್ರಸ್ಟ್‌ನ ಸಭೆಯನ್ನು ಇಂದು ನಡೆಸಲಿದ್ದಾರೆ. ಶ್ರೀ ಸೋಮನಾಥ ಟ್ರಸ್ಟ್‌ನ ಅಧ್ಯಕ್ಷರೂ ಆಗಿರುವ ಅವರು, ಜುನಾಗಢ್ ಜಿಲ್ಲೆಯ ಗಿರ್ ರಾಷ್ಟ್ರೀಯ ಉದ್ಯಾನದ ಮುಖ್ಯ ಕಚೇರಿ ಇರುವ ಸಾಸನ್‌ನಲ್ಲಿ ಸಭೆ ನಡೆಸುವರು. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು,

ಜಾಮ್‌ನಗರದ ವಂತಾರ ಪ್ರಾಣಿ ಉಪಚಾರ ಮತ್ತು ಪುನರ್ ವಸತಿ ಕೇಂದ್ರಕ್ಕೆ ಇಂದು ಭೇಟಿ ನೀಡಿದರು. ಸುಮಾರು ೩ ಸಾವಿರ ಎಕರೆ ಪ್ರದೇಶದಲ್ಲಿ ಪ್ರಾಣಿ ಸಂರಕ್ಷಣೆ ಮತ್ತು ಪುನರ್ ವಸತಿಗೆ ಅವಕಾಶ ಕಲ್ಪಿಸಲಾಗಿದೆ. ನಾಳೆ ಪ್ರಧಾನಿಯವರು ಏಷ್ಯಾ ಸಿಂಹಕ್ಕೆ ಹೆಸರಾಗಿರುವ ಗಿರ್ ರಾಷ್ಟ್ರೀಯ ಉದ್ಯಾನದಲ್ಲಿ ಜಂಗಲ್ ಸಫಾರಿ ಮಾಡಲಿದ್ದಾರೆ. ವನ್ಯ ಜೀವಿಗಳಿಗೆ ಸಂಬಂಧಿಸಿದಂತೆ ರಾಷ್ಟ್ರೀಯ ಮಟ್ಟದ ವಿಚಾರಗಳ ಬಗ್ಗೆ ಚರ್ಚೆ ನಡೆಸಲು ವನ್ಯಜೀವಿ ರಾಷ್ಟ್ರೀಯ ಮಂಡಳಿಯ ೭ನೇ ಸಭೆಯ ನೇತೃತ್ವ ವಹಿಸಲಿದ್ದಾರೆ. ಪ್ರಧಾನಿಯವರು ಈ ಮಂಡಳಿಯ ಅಧ್ಯಕ್ಷರೂ ಆಗಿದ್ದಾರೆ.

<><><><>

ಕೇಂದ್ರ ಕಲ್ಲಿದ್ದಲು ಇಲಾಖೆ ಕಲ್ಲಿದ್ದಲು ಗಣಿಗಾರಿಕೆಗೆ ಖಾಸಗಿ ಬಂಡವಾಳ ಆಕರ್ಷಿಸಲು ಗುಜರಾತ್‌ನ ಗಾಂಧೀನಗರದಲ್ಲಿ ನಾಳೆ ರೋಡ್ ಶೋ ಆಯೋಜಿಸಿದೆ.

<><><><>

ದೇಶದ ಆಹಾರ ಪೂರೈಕೆ ಸರಪಳಿಯನ್ನು ಬಲಪಡಿಸುವಲ್ಲಿ ಕೇಂದ್ರೀಯ ಉಗ್ರಾಣ ನಿಗಮ ಮಹತ್ವದ ಪಾತ್ರ ವಹಿಸುತ್ತಿದೆ ಎಂದು ಕೇಂದ್ರ ಗ್ರಾಹಕ ವ್ಯವಹಾರ, ಆಹಾರ ಮತ್ತು ಸಾರ್ವಜನಿಕ ವಿತರಣಾ ಖಾತೆ ಸಚಿವ ಪ್ರಲ್ಹಾದ್ ಜೋಶಿ ಹೇಳಿದ್ದಾರೆ. ಕೇಂದ್ರೀಯ ಉಗ್ರಣ ನಿಗಮದ ೬೯ನೇ ಸಂಸ್ಥಾಪನಾ ದಿನದ ಸಂದರ್ಭದಲ್ಲಿ ವಿಡಿಯೋ ಸಂದೇಶ ಹಂಚಿಕೊಂಡಿರುವ ಅವರು, ನಿಗಮ ೨೦೨೩-೨೪ ನೇ ಹಣಕಾಸು ವರ್ಷದಲ್ಲಿ ೨೧ ಲಕ್ಷ ಚದುರ ಅಡಿಗೂ ಮೀರಿದ ಹೆಚ್ಚುವರಿ ಆಹಾರ ಸಂಗ್ರಹಣಾ ಸಾಮರ್ಥ್ಯ ನಿರ್ಮಿಸುವ ಮೂಲಕ ಶ್ಲಾಘನೀಯ ಪ್ರಯತ್ನ ಮಾಡಿದೆ ಎಂದು ತಿಳಿಸಿದ್ದಾರೆ. ಪ್ರಧಾನಮಂತ್ರಿ ಗರೀಬ್ ಕಲ್ಯಾಣ ಯೋಜನೆ, ಪ್ರಧಾನಮಂತ್ರಿ ಅನ್ನದಾತ ಆಯ ಸಂರಕ್ಷಣಾ ಅಧಿನಿಯಮ ಮೊದಲಾದ ಕಾರ್ಯಕ್ರಮಗಳನ್ನು ನಿಗಮ ಯಶಸ್ವಿಯಾಗಿ ಜಾರಿಗೊಳಿಸುತ್ತಿದೆ. ಬೆಳೆಕಾಳು, ಹತ್ತಿ, ಶೇಂಗಾ, ಬೆಳೆಗಳ ಸಂಗ್ರಹಣೆ, ನಿರ್ವಹಣೆ ಸಾಗಾಟದಲ್ಲಿ ನಿಗಮ ಕಾರ್ಯನಿರ್ವಹಿಸುತ್ತಿದೆ ಎಂದು ಪ್ರಲ್ಹಾದ್ ಜೋಶಿ ತಿಳಿಸಿದ್ದಾರೆ.

ಧ್ವನಿ: ಪ್ರಲ್ಹಾದ್ ಜೋಶಿ (೨೨ ಸೆಕೆಂಡ್‌ಗಳು)

ಸಾರ್ವಜನಿಕ ಕ್ಷೇತ್ರದ ಕೇಂದ್ರೀಯ ಉಗ್ರಾಣ ಹಾಗೂ ಸಾಗಾಟ ಸೇವೆಯನ್ನು ಒದಗಿಸುತ್ತಿದೆ.

<><><><>

ಷೇರು ಮಾರುಕಟ್ಟೆಯಲ್ಲಿ ವಂಚನೆ ಮತ್ತು ನಿಯಂತ್ರಣ ಉಲ್ಲಂಘನೆ ಆಪಾದನೆಗೆ ಸಂಬಂಧಿಸಿದಂತೆ ಮುಂಬೈಯ ಭ್ರಷ್ಟಾಚಾರ ವಿರೋಧಿ ವಿಶೇಷ ನ್ಯಾಯಾಲಯ, ಸೆಕ್ಯೂರಿಟಿಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ - ಸೆಬಿಯ ಮಾಜಿ ಅಧ್ಯಕ್ಷ ಸೇರಿದಂತೆ ಹಿರಿಯ ಅಧಿಕಾರಿಗಳ ವಿರುದ್ಧ ಎಫ್‌ಐಆರ್ ದಾಖಲಿಸಲು ಆದೇಶ ನೀಡಿದೆ. ಥಾಣೆಯ ಪತ್ರಕರ್ತರೊಬ್ಬರು ಸಲ್ಲಿಸಿದ ಅರ್ಜಿ

ಹಿನ್ನೆಲೆಯಲ್ಲಿ ವಿಶೇಷ ನ್ಯಾಯಾಧೀಶ ನ್ಯಾಯಮೂರ್ತಿ ಎಸ್.ಇ. ಬಂಗಾರ್ ಈ ಆದೇಶ ನೀಡಿದ್ದಾರೆ. ಪ್ರಕರಣ ಕುರಿತಾದ ತನಿಖೆಯ ನಿಗಾ ವಹಿಸುವುದಾಗಿ ನ್ಯಾಯಾಲಯ ತಿಳಿಸಿದೆ. ಹಾಗೂ ಪ್ರಕರಣ ಕುರಿತಂತೆ ವಸ್ತುಸ್ಥಿತಿ ವರದಿ ಸಲ್ಲಿಸಿದಂತೆಯೂ ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನ ನೀಡಿದೆ.

<><><>

ಕರ್ನಾಟಕ ವಿಧಾನಮಂಡಲದ ಬಜೆಟ್ ಅಧಿವೇಶನ ನಾಳೆ ಆರಂಭವಾಗಲಿದೆ. ಇದು ಈ ವರ್ಷದ ಮೊದಲ ಅಧಿವೇಶನವಾಗಿರುವುದರಿಂದ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು, ವಿಧಾನಮಂಡಲದ ಉಭಯ ಸದನಗಳ ಸದಸ್ಯರನ್ನು ಉದ್ದೇಶಿಸಿ ಭಾಷಣ ಮಾಡುವ ಮೂಲಕ ಅಧಿವೇಶನ ಪ್ರಾರಂಭಗೊಳ್ಳಲಿದೆ. ನಾಳೆ ೧೧ ಗಂಟೆಗೆ ಅಧಿವೇಶನ ನಿಗದಿಯಾಗಿದೆ. ಹಣಕಾಸು ಖಾತೆಯನ್ನೂ ಹೊಂದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಇದೇ ೭, ಶುಕ್ರವಾರದಂದು ಕರ್ನಾಟಕದ ಬಜೆಟ್ ಅನ್ನು ಮಂಡಿಸಲಿದ್ದಾರೆ.

<><><>

ಸಾರ್ವಜನಿಕರ ಅಗತ್ಯ ಹಾಗೂ ಬೇಡಿಕೆ ಅನುಸಾರವಾಗಿ ವಿಮಾನ ನಿಲ್ದಾಣಗಳನ್ನು ಅಭಿವೃದ್ಧಿಪಡಿಸುವಲ್ಲಿ ಕೇಂದ್ರ ಸರ್ಕಾರ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ಕೇಂದ್ರ ವಿಮಾನ ಖಾತೆ ಸಚಿವ ಕೆ. ರಾಮಮೋಹನ್ ನಾಯ್ಡು ಹೇಳಿದ್ದಾರೆ. ಅವರು, ಹೈದರಾಬಾದ್‌ನಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿ, ಕೇಂದ್ರ ಸರ್ಕಾರ ಉಡಾನ್ ಯೋಜನೆಯ ಮೂಲಕ ವಿಮಾನ ನಿಲ್ದಾಣ ಸೌಲಭ್ಯವನ್ನು ದೇಶದ ೨ನೇ ಹಾಗೂ ೩ನೇ ಸ್ತರದ ನಗರಗಳಿಗೂ ಒದಗಿಸಿದೆ. ಕೇಂದ್ರ ಸರ್ಕಾರ ವರಂಗಲ್ ಬಳಿಯ ಮಾಮ್ನೂರು ವಿಮಾನ ನಿಲ್ದಾಣ ಅಭಿವೃದ್ಧಿ ಪಡಿಸಲು ಇತ್ತೀಚೆಗೆ ಒಪ್ಪಿಗೆ ನೀಡಿದೆ. ಬದ್ರಾದ್ರಿ ಕೊಥಗುಡೆಮ್ ಜಿಲ್ಲೆಯಲ್ಲಿ ಇನ್ನೊಂದು ವಿಮಾನ ನಿಲ್ದಾಣ ಅಭಿವೃದ್ಧಿಪಡಿಸಲು ಕೇಂದ್ರ ಸರ್ಕಾರ ಸಿದ್ಧವಿದೆ ಎಂದು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಕೇಂದ್ರ ಸಚಿವ ಜಿ. ಕಿಶನ್ ರೆಡ್ಡಿ ಉಪಸ್ಥಿತರಿದ್ದರು.

<><><>

ರಾಷ್ಟ್ರೀಯ ಮಾನವಹಕ್ಕು ಆಯೋಗ ಜಾಗತಿಕ ದಕ್ಷಿಣದ ರಾಷ್ಟ್ರೀಯ ಮಾನವಹಕ್ಕು ಸಂಸ್ಥೆಗಳ ಹಿರಿಯ ಕಾರ್ಯ ನಿರ್ವಾಹಕರಿಗಾಗಿ ಸಾಮರ್ಥ್ಯ ನಿರ್ಮಾಣ ಕಾರ್ಯಕ್ರಮ ಆಯೋಜಿಸಿದೆ. ಆರು ದಿನಗಳ ಈ ಕಾರ್ಯಕ್ರಮ ನಾಳೆ ಆರಂಭವಾಗಲಿದೆ. ದಕ್ಷಿಣ ದಕ್ಷಿಣ ಸಹಕಾರ ಕಾರ್ಯಜಾಲ ಸಹಯೋಗದ ವರ್ಧನೆ, ಸಮಗ್ರ ಸಾಮರ್ಥ್ಯ ನಿರ್ಮಾಣ ಮತ್ತು ಅನುಭವ ಹಂಚಿಕೆಗಳ ಮೂಲಕ ಮಾನವ ಹಕ್ಕು ಸಂರಕ್ಷಣೆ ವ್ಯವಸ್ಥೆ ಬಲಪಡಿಸುವುದು ಈ ಕಾರ್ಯಕ್ರಮದ ಉದ್ದೇಶವಾಗಿದೆ.

ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ ನ್ಯಾಯಮೂರ್ತಿ ವಿ. ರಾಮ ಸುಬ್ರಮಣಿಯನ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಜಾಗತಿಕ ದಕ್ಷಿಣದ ೧೪ ದೇಶಗಳ ಸಂಸ್ಥೆಗಳ ೪೭ ಕಾರ್ಯನಿರ್ವಾಹಕರು ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ನಿರೀಕ್ಷೆಯಿದೆ. ಮಡ್ಗಾಸ್ಕರ್, ಉಗಾಂಡ, ಸಮೊವಾ, ತಿಮೊರ್ ಲೆಸ್ತೆ, ಡಿಆರ್ ಕಾಂಗೊ, ಟೊಗೊ, ಮಾಲಿ, ನೈಜೇರಿಯಾ, ಈಜಿಪ್ಟ್, ತಾಂಜನೀಯಾ, ಮಾರಿಷಿಯಸ್, ಬುರುಂಡಿ ದೇಶಗಳ ಮಾನವ ಹಕ್ಕು ನಿರ್ವಾಹಕರು ಭಾಗಿಯಾಗಲಿದ್ದಾರೆ.

<><><><>

ಉತ್ತರಾಖಂಡ್‌ನ ಚಮೋಲಿಯಾದ ಮಾನ ಬಳಿ ಸಂಭವಿಸಿರುವ ಹಿಮಬಂಡೆಪಾತ ಅಪಘಾತದಲ್ಲಿ ಮೃತಪಟ್ಟವರ ಸಂಖ್ಯೆ ೮ಕ್ಕೇರಿದೆ. ಹಿಮಬಂಡೆ ನಡುವೆ ಸಿಲುಕಿದ್ದ ೫೪ ಕಾರ್ಮಿಕರಲ್ಲಿ ಶೋಧನಾ ತಂಡ ೪೬ ಕಾರ್ಮಿಕರನ್ನು ಸಂರಕ್ಷಿಸಿದೆ. ಮುಖ್ಯಮಂತ್ರಿ ಪುಷ್ಕರ್‌ಸಿಂಗ್ ಧಾಮಿ, ಡೆಹ್ರಾಡೂನ್‌ನಲ್ಲಿ ಸ್ಥಾಪಿಸಲಾಗಿರುವ ವಿಕೋಪ ನಿಯಂತ್ರಣ ಕೊಠಡಿಗೆ ಭೇಟಿ ನೀಡಿ ಪರಿಸ್ಥಿತಿ ಪರಾಮರ್ಶಿಸಿದರು.

<><><><>

ಅಮೆರಿಕದ ಫೈರ್ ಫ್ಲೈ ಏರೋ ಸ್ಪೇಸ್ ಸಂಸ್ಥೆ ಹಾರಿಬಿಟ್ಟ ಬ್ಲೂಗೋಸ್ಟ್ ಬಾಹ್ಯಾಕಾಶ ನೌಕೆ ಇಂದು ಚಂದ್ರನ ಮೇಲೆ ಯಶಸ್ವಿಯಾಗಿ ಇಳಿದಿದೆ. ಮೆರ್‌ಕ್ರಿಸಿಯಮ್ ಬಳಿ ಚಂದ್ರಸ್ಪರ್ಶ ಮಾಡಿದೆ. ಬ್ಲೂಗೋಸ್ಟ್ ಬಾಹ್ಯಾಕಾಶ ನೌಕೆ ೧೦ ವಿವಿಧ ವೈಜ್ಞಾನಿಕ ಪೇಲೋಡ್‌ಗಳನ್ನು ಕೊಂಡೊಯ್ದಿದೆ. ಬ್ಲೂಗೋಸ್ಟ್ ಚಂದ್ರನ ಮೇಲೆ ಯಶಸ್ವಿಯಾಗಿ ನೌಕೆಯನ್ನು ಇಳಿಸಿದ ೨ನೇ ಸಂಸ್ಥೆಯಾಗಿದ್ದು, ಕಳೆದ ವರ್ಷ ಇನ್‌ಟ್ಯೂಟಿವ್ ಮಿಷನ್ ಸಂಸ್ಥೆ ಈ ನಿಟ್ಟಿನಲ್ಲಿ ಭಾಗಶಃ ಯಶಸ್ಸು ಕಂಡಿತ್ತು.

<><><><>

ಪ್ರಾಗ್ ಮಾಸ್ಟರ್ಸ್ ಚೆಸ್ ಟೂರ್ನ್‌ಮೆಂಟ್‌ನಲ್ಲಿ ಭಾರತದ ಆರ್. ಪ್ರಜ್ಞಾನಂದಾ, ೨ನೇ ಸತತ ವಿಜಯದೊಂದಿಗೆ ಮುನ್ನಡೆದಿದ್ದಾರೆ. ೨ನೇ ಪಂದ್ಯದಲ್ಲಿ ಅವರು ಜರ್ಮನಿಯ ವಿನ್‌ಸೆಂಟ್ ಕೇಮರ್ ಅವರನ್ನು ಪರಾಭವಗೊಳಿಸಿದರು. ಭಾರತದ ಮತ್ತೊಬ್ಬ ಆಟವಾರ ಅರವಿಂದ್ ಚಿರಂಬರಂ ಅಮೆರಿಕದ ಸ್ಯಾಮ್ ಶಾಂಕ್‌ಲ್ಯಾಂಡ್ ಅವರೊಂದಿಗೆ ಪಂದ್ಯ ಡ್ರಾ ಮಾಡಿಕೊಂಡರು. ಭಾರತದ ಈ ಇಬ್ಬರು ಆಟಗಾರರು ೪ನೇ ಸುತ್ತಿನ ಪಂದ್ಯದ ವೇಳೆಗೆ ತಲಾ ೩ ಅಂಕಗಳನ್ನು ಗಳಿಸಿ ಅಗ್ರಸ್ಥಾನದಲ್ಲಿದ್ದಾರೆ. ಈ ಪಂದ್ಯಾವಳಿಯಲ್ಲಿ ಇನ್ನು ೫ ಸುತ್ತಿನ ಆಟ ಬಾಕಿಯಿದೆ.

<><><><>

ಈ ಬಾರಿಯ ಪ್ರತಿಷ್ಟಿತ ದೇಶಿಯ ಕ್ರಿಕೆಟ್ ಟೂರ್ನಿಯ ರಣಜಿ ಟ್ರೋಫಿ ವಿದರ್ಭ ತಂಡದ ಪಾಲಾಗಿದೆ. ನಾಗ್ಪುರದ ವಿಸಿಎ ಕ್ರೀಡಾಂಗಣದಲ್ಲಿ ನಡೆದ ಫೈನಲ್ ಪಂದ್ಯ ಇಂದು ಡ್ರಾದಲ್ಲಿ

ಕೊನೆಗೊಂಡಿತು. ಆದರೆ ಮೊದಲ ಇನ್ನಿಂಗ್ಸ್‌ನಲ್ಲಿ ಮುನ್ನಡೆ ಸಾಧಿಸಿದ್ದ ವಿದರ್ಭವನ್ನು ಈ ಪಂದ್ಯದ ವಿಜೇತರೆಂದು ಘೋಷಿಸಲಾಯಿತು.

<><><><>

ದುಬೈ ಅಂತಾರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಐಸಿಸಿ ಚಾಂಪಿಯನ್ಸ್ ಟ್ರೋಫಿ ಏಕದಿನ ಕ್ರಿಕೆಟ್ ಪಂದ್ಯಾವಳಿಯ ತನ್ನ ಕೊನೆಯ ಗುಂಪು ಹಂತದ ಪಂದ್ಯದಲ್ಲಿ ಭಾರತ, ನ್ಯೂಜಿಲೆಂಡ್‌ಗೆ ಗೆಲ್ಲಲು ೨೫೦ ರನ್‌ಗಳ ಗುರಿ ನೀಡಿದೆ. ಭಾರತ ನಿಗದಿತ ೫೦ ಓವರ್‌ಗಳಲ್ಲಿ ೯ ವಿಕೆಟ್ ನಷ್ಟಕ್ಕೆ ೨೪೯ ರನ್‌ಗಳಿಸಿತು. ಶ್ರೇಯಸ್ ಅಯ್ಯರ್ ೭೯, ಹಾರ್ದಿಕ್ ಪಾಂಡ್ಯ ೪೫ ರನ್ ಮಾಡಿದರು. ನ್ಯೂಜಿಲೆಂಡ್ ಪರ ಮ್ಯಾಟ್ ಹೆನ್ರಿ ೫ ವಿಕೆಟ್ ಗಳಿಸಿದರು. ಇತ್ತೀಚಿನ ವರದಿ ಬಂದಾಗ ನ್ಯೂಜಿಲೆಂಡ್ ತಂಡ ೧೩.೧ ಓವರ್‌ಗಳಲ್ಲಿ ೨ ವಿಕೆಟ್ ನಷ್ಟಕ್ಕೆ ೫೦ ರನ್ ಮಾಡಿ ಆಡುತ್ತಿದೆ. ಭಾರತ, ನ್ಯೂಜಿಲೆಂಡ್ ಎರಡೂ ತಂಡಗಳು ಗುಂಪು 'ಎ' ದಿಂದ ಈಗಾಗಲೇ ಸೆಮಿಫೈನಲ್ ಪ್ರವೇಶಿಸಿವೆ. ಈ ಪಂದ್ಯದಲ್ಲಿ ವಿಜೇತವಾಗುವ ತಂಡ ಸೆಮಿಫೈನಲ್ಸ್‌ನಲ್ಲಿ ಆಸ್ಟ್ರೇಲಿಯಾವನ್ನು ಎದುರಿಸಲಿದೆ. ಪರಾಭವಗೊಳ್ಳುವ ತಂಡ ದಕ್ಷಿಣ ಆಫ್ರಿಕಾ ವಿರುದ್ಧ ಸೆಣಸಲಿದೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>